O.S. No.224/2017 P.W. 1 Dated :21-08-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲು -ಶ್ರೀ. ಬಿ.ಎಂ.ಜಿ. ವಕೀಲರಿಂದ.

ನನ್ನ ಅಜ್ಜಿ ಮರಿಯಮ್ಮನವರಿಗೆ ಲಕ್ಷ್ಮಮ್ಮ ಎಂಬ ಒಬ್ಬಳು ಮಗಳು, ಅವರಿಗೆ ಗಂಡು ಮಕ್ಕಳಿರುವುದಿಲ್ಲ. ಮರಿಯಮ್ಮನ ಅಕ್ಕ ನಿಂಗಮ್ಮನವರಿಗೆ ಒಟ್ಟು 4 ಜನ ಮಕ್ಕಳಿದ್ದು , ಅವರಲ್ಲಿ ಇಬ್ಬರು ಮೃತರಾಗಿದ್ದು , ಈಗ ಮರಿಯಮ್ಮ ಃಉಃ ಪುಟ್ಟಮ್ಮ ಮತ್ತು ಲಂಕೇಗೌಡ ಎಂಬುವವರು ಬದುಕಿದ್ದಾರೆ. ದಾವೆ ಹೂಡುವ ಮೊದಲು ಲಂಕೇಗೌಡರು ಮರಣ ಹೊಂದಿರುತ್ತಾರೆ ಎಂದರೆ ಸರಿ . ಮರಿಯಮ್ಮನವರಿಗೆ ಗಂಡುಮಕ್ಕಳಿಲ್ಲದ ಕಾರಣ ಲಂಕೇಗೌಡರನ್ನು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. 1935 ನೇ ಇಸವಿಯಲ್ಲಿ ಸ.ನಂ.154/4 ರಲ್ಲಿ 14 ಗುಂಟೆ ಕರೇಗೌಡರು ಕ್ರಯಪತ್ರದ ಮುಖಾಂತರ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. 1948 ರಲ್ಲಿ ನನ್ನ ಅಜ್ಜಿ ಮರಿಯಮ್ಮ ಸ.ನಂ.154/4 ರಲ್ಲಿ 27 ಗುಂಟೆಯನ್ನು ಕರಯಪತ್ರದ ಮುಖಾಂತರ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು 1 ಎಕರೆ 12 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ಕ್ರಯಪತ್ರದಆಧಾರದ ಮೇಲೆ ಮರಿಯಮ್ಮ ಮತ್ತು ಕರೇಗೌಡರು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ , ಸಾಕ್ಷಿಯು ಮುಂದುವರಿದು ಕರೇಗೌಡರು ಜಮೀನನ್ನು ಖರೀದಿ ಮಾಡಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಗಂಡನಾದ ಲಂಕೇಗೌಡ ಮರಿಯಮ್ಮನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ಕಾರಣ ಮರಿಯಮ್ಮನ ಹೇಳಿಕೆಯ ಮೇರೆಗೆ ಸ.ನಂ. 154/4 ರಲ್ಲಿ 07 ಗುಂಟೆ ಜಮೀನು ಲಂಕೇಗೌಡರ ಹೆಸರಿಗೆ ಖಾತೆಯಾಗಿತ್ತು ಎಂದರೆ ಸರಿಯಲ್ಲ. ಮರಿಯಮ್ಮನವರ ಹೇಳಿಕೆಯ ಆಧಾರದ ಮೇಲೆ ಲಂಕೇಗೌಡರಿಗೆ 21 ಗುಂಟೆ , ಮರಿಯಮ್ಮನಿಗೆ 20 ಗುಂಟೆ ಖಾತೆಯಾಗಿತ್ತು ಎಂದರೆ ಸರಿಯಲ್ಲ. ಮರಿಯಮ್ಮನವರಿಗೆ ವಯಸ್ಸಾದ ನಂತರ ನಾನು ನೋಡಿಕೊಳ್ಳುತ್ತಿದ್ದೆನು ಆ ವೇಳೆಯಲ್ಲಿ ಮರಿಯಮ್ಮನಿಗೆ ವ್ಯವಹಾರ ಜ್ಞಾನ

ಕ್ಷೀಣಿಸಿತ್ತು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಎಂದಿಗೂ ಸಹಾ ಲಂಕೇಗೌಡರು ಮರಿಯಮ್ಮನವರ ಯೋಗಕ್ಷೇಮವನ್ನು ನೋಡಿಕೊಂಡಿರುವುದಿಲ್ಲ ಹಾಗೂ ಸಾಕಿಕೊಂಡಿರಲಿಲ್ಲ, ಹುಟ್ಟಿದಾಗಿನಿಂದಲೂ ನಾನು ನಮ್ಮ ಅಜ್ಜಿ ಜೊತೆ ವಾಸವಾಗಿದ್ದು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುತ್ತೇನೆ ಎಂದು ನುಡಿಯುತ್ತಾರೆ. ಮರಿಯಮ್ಮನವರಿಗೆ ವಯಸ್ಸಾಗಿದ್ದು , ವ್ಯವಹಾರ ಜ್ಞಾನ ಕ್ಷೀಣವಾಗಿದ್ದ ಕಾರಣ ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಿಂದಿನ ದಾಖಲೆಗಳ ಬಗ್ಗೆ ಪರಿಶೀಲನೆ ಮಾಡದೇ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮರಿಯಮ್ಮನವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮರಿಯಮ್ಮನವರು ಯಾವಾಗ ಮರಣ ಹೊಂದಿದರು ಎಂದು ನಿರ್ಧಿಷ್ಟ ದಿನಾಂಕವು ಈಗ ನನಗೆ ನೆನಪಿರುವುದಿಲ್ಲ. ನಿಪಿ-4 ರಲ್ಲಿ 1985 ರಲ್ಲಿ ಎಂದು ನಮೂದಾಗಿರುತ್ತದೆ ಎಂದರೆ ಸರಿ . ವಿಲ್ ಆದ ನಂತರ ಖಾತೆ ವರ್ಗಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಖಾತೆ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಕಂದಾಯ  ದಾಖಲೆಗಳು ಯಾರ ಹೆಸರಿನಲ್ಲಿವೆ ಎಂದು ತಿಳಿದುಕೊಂಡಿದ್ದೀರಾ, ಎಂದರೆ ಸಾಕ್ಷಿಯು ಲಂಕೇಗೌಡರ ಮಕ್ಕಳಾದ ಕರೀಗೌಡ ಮತ್ತು ಸಂಜೀವೇಗೌಡ ರವರು ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ಒಪ್ಪಿಕೊಂಡಿದ್ದರು ಎಂದು ನುಡಿಯುತ್ತಾರೆ. 7-8 ವರ್ಷಗಳ ಹಿಂದೆ ದಾವಾ ಸ್ವತ್ತಿನ ದಾಖಲೆಗಳು ಲಂಕೇಗೌಡರ ಹೆಸರಿನಲ್ಲಿರುವ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿನ ದಾಖಲೆಗಳು ಪ್ರತಿವಾದಿಗಳ ಹೆಸರಿನಲ್ಲಿರುವ ಬಗ್ಗೆ ತಹಸೀಲ್ದಾರ್ ಅಥವಾ ಎ ಸಿ ನಾಯಾಲಯದಲ್ಲಿ ಪ್ರಶ್ನಿಸಿದ್ದೀರಾ, ಎಂದರೆ ಸಾಕ್ಷಿಯು ಆ ನ್ಯಾಯಾಲಯಗಳಲ್ಲಿ ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. 1983 ರಿಂದ 1987 ನೇ ಇಸವಿಯವರೆಗೆ ದಾವಾ ಸ್ವತ್ತಿನ ಪಹಣಿ ಕರೇಗೌಡ ಬಿನ್ ಲಕ್ಕೇಗೌಡರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಕರೇಗೌಡರ ಹೆಸರನ್ನು ಈರೇಗೌಡ ಎಂದು ತಿದ್ದುಪಡಿ ಮಾಡಿರುವ ಕಾರಣ 1983 ರಿಂದ 1987 ನೇ ಇಸವಿಯವರೆಗೆ ದಾವಾ ಸ್ವತ್ತಿನ ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾವು ತಿದ್ದುಪಡಿ ಮಾಡಿರುವುದಿಲ್ಲ ಎಂದು

ನುಡಿಯುತ್ತಾರೆ. 1983 ರಿಂದ 1987 ನೇ ಇಸವಿಯವರೆಗೆ ದಾವಾ ಸ್ವತ್ತಿನ ಪಹಣಿಗಳನ್ನು ಹಾಜರುಪಡಿಸಿದಲ್ಲಿ ದಾವಾ ಸ್ವತ್ತಿನ ಕ್ರಯವಾಗಿರುವ ವಿಷಯ ತಿಳಿದುಬರುತ್ತದೆ ಎಂಬ ಕಾರಣಕ್ಕಾಗಿ ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.154/4 ರ 21 ಗುಂಟೆ ಜಮೀನಿಗೆ ನಾನು ಹಕ್ಕುದಾರಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸಂಪೂರ್ಣ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಸ.ನಂ.154/4 ರ 20 ಗುಂಟೆ ಜಮೀನಿಗೆ ಮಾತ್ರ ಹಕ್ಕುದಾರಳು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು , 1 ಎಕರೆ 01 ಗುಂಟೆಗೆ ನಾನು ಹಕ್ಕುದಾರಳು ಎಂದು ನುಡಿಯುತ್ತಾರೆ. 1948 ರ ಕ್ರಯಪತ್ರವನ್ನುನ್ಯಾಯಾಲಯಕ್ಕೆ ಹಾಜರುಪಡಿಸಿದಲ್ಲಿ ಸತ್ಯಾಂಶ ತಿಳಿಯುತ್ತದೆ ಎಂಬ ಕಾರಣಕ್ಕಾಗಿ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯ ತಿಳಿಯದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.